# ಬೇರಿನ ಸೇತುವೆ

ಈ ಬೇರಿನ ಸೇತುವೆಯನ್ನು ನೋಡಿ. ಕಳೆದ ನೂರು ವರ್ಷಗಳಿಂದ ಇಂಡೊನೇಷ್ಯಾ ಸುಮಾತ್ರಾದ ಪಶ್ಚಿಮ ಭಾಗದಲ್ಲಿರುವ ಎರಡು ಪುಟ್ಟ ಹಳ್ಳಿಗಳಲ್ಲಿನ ಜನರು ಈ ನೈಸರ್ಗಿಕ ಸೇತುವೆಯನ್ನು ತಮ್ಮ ಅನುಕೂಲಕ್ಕಾಗಿ ಬಳಸುತ್ತಿದ್ದಾರೆ. ಇದರಲ್ಲೇನು ವಿಶೇಷ ಎಂದುಕೊಂಡಿರಾ? ಇದು ಸುಮಾರು 30 ಮೀಟರ್‌ನಷ್ಟು ಉದ್ದ, 1.5 ಮೀಟರ್ ಅಗಲವಾಗಿದೆ. ರಭಸವಾಗಿ ಹರಿವ ನದಿಯ ಮೇಲಿರುವ ಈ ಸೇತುವೆಯು ಮರಗಳ ಬೇರಿನಿಂದ ನಿರ್ಮಿತವಾಗಿದೆ. ಹಳ್ಳಿಗರಿಗೆ ಪರಸ್ಪರ ವ್ಯಾಪಾರ ವಹಿವಾಟು ನಡೆಸಲು ಅನುಕೂಲವಾಗಿರುವ ಪ್ರಕೃತಿದತ್ತ ಈ ಅಚ್ಚರಿಯೇ 'ಜೆಂಬೆಟನ್ ಆಕಾರ್'. ಇಂಡೊನೇಷ್ಯಾ ಭಾಷೆಯಲ್ಲಿ ಜೆಂಬೆಟನ್ ಎಂದರೆ ಸೇತುವೆ ಹಾಗೂ ಆಕಾರ್ ಎಂದರೆ ಮರದ ಬೇರು ಎಂಬರ್ಥವಿದೆ.

ಸ್ಥಳೀಯರ ಪ್ರಕಾರ ಈ ಅದ್ಭುತ ಸೇತುವೆಯು ನಿರ್ಮಾಣಗೊಂಡಿದ್ದು 1890ರಲ್ಲಿ. ಸೇತುವೆ ಇಲ್ಲದ ಕಾರಣ ಪುಲುತ್ ಹಳ್ಳಿಯಲ್ಲಿನ ವಿದ್ಯಾರ್ಥಿಗಳಿಗೆ ಲುಬ್ವಾಕ್ ಗೇರ್‌ನಲ್ಲಿದ್ದ ಪಾಕಿಹ್ ಸೋಹನ್ ಎಂಬ ಮುಸ್ಲಿಂ ಗುರುವಿನ ಕುರಾನ್ ತರಗತಿಗಳಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ಈ ಗುರು ಬಹಳ ನಿರಾಶೆಗೊಂಡಿದ್ದನು.

ಬತಾಂಗ್ ಬಯಾಂಗ್ ನದಿಯು ಆ ಎರಡು ಹಳ್ಳಿಗಳನ್ನು ಬೇರ್ಪಡಿಸಿತ್ತು. ಅದಕ್ಕಾಗಿ ಈತ ಅಗಲ ಎಲೆಗಳುಳ್ಳ ಜಾವಿ ಜಾತಿಯ ಅರಳೀ ಸಸಿಗಳನ್ನು ನದಿಯ ಎರಡೂ ದಡಗಳಲ್ಲಿ ನೆಟ್ಟನು. ಅದರ ಬೇರುಗಳನ್ನು ಅಷ್ಟೇನೂ ಗಟ್ಟಿಯಾಗಿರದ, ಬಿದಿರಿನ ಸೇತುವೆಯ ಮೇಲೆ ಹೆಣೆಯಲು ಪ್ರಾರಂಭಿಸಿದನು. ಕೆಲವೇ ವರ್ಷಗಳಲ್ಲಿ ಆ ಎರಡು ಮರಗಳ ಬೇರುಗಳು ಒಂದನ್ನೊಂದು ಸಂಧಿಸಿದವು. ಆದರೆ ಜನರು ಅದರ ಮೇಲೆ ಓಡಾಡುವಷ್ಟು ಗಟ್ಟಿ ಮುಟ್ಟಾಗಿರಲಿಲ್ಲ. ಸುಮಾರು 26 ವರ್ಷಗಳ ನಂತರ ಸಂಚರಿಸುವ ಜನರ ಭಾರವನ್ನು ತಡೆದುಕೊಳ್ಳುವಷ್ಟು ಆ ಸೇತುವೆಯು ಗಟ್ಟಿಮುಟ್ಟಾಯಿತು. ದಡಗಳಲ್ಲಿನ ಅರಳಿ ಮರಗಳು ಬೆಳೆಯುತ್ತಾ ಹೋದಂತೆ, ಈ ಸೇತುವೆಯೂ ಇನ್ನೂ ಗಟ್ಟಿಗೊಳ್ಳತೊಡಗಿತು. ಈಗಂತೂ ಈ ಬೇರಿನ ಸೇತುವೆ ವಿದೇಶಿ ಪ್ರವಾಸಿಗರ ಹಾಗೂ ಸ್ಥಳೀಯರ ಅತ್ಯಂತ ಅಚ್ಚುಮೆಚ್ಚಿನ ಪ್ರವಾಸಿ ತಾಣವಾಗಿದೆ.

■ ವಿನಯ್‌ಕುಮಾರ್ ಬಿ.ಹೆಚ್



